# ವಿಶೇಷ ಮಕ್ಕಳ 'ಮಂತ್ರಿಸಿದ ದೀಪ'



ಸರ್ಬಾನಿ ಮಲ್ಲಿಕ್

ಸಣ್ಣಸಣ್ಣ ವಿಷಯಗಳಿಗೆ ಭಯ ಪಡುವುದು, ಕಿರುಚಾಡುವ ಬುದ್ಧಿಮಾಂದ್ಯ ಮಕ್ಕಳನ್ನು ಕಂಡರೆ ಸಾಮಾನ್ಯವಾಗಿ ಎಲ್ಲರೂ ಕನಿಕರದಿಂದ ನೋಡುತ್ತಾರೆ. ಆದರೆ ಅವರೊಳಗಿನ ಪ್ರತಿಭೆ ಅನಾವರಣಗೊಳಿಸುವ ಪ್ರಯತ್ನಕ್ಕೆ ಯಾರೂ ಮುಂದಾಗುವುದಿಲ್ಲ. ಕೆಲವೊಮ್ಮೆ ಪೋಷಕರೂ ಕೈಚೆಲ್ಲಿ ಕುಳಿತುಬಿಡುತ್ತಾರೆ.

ಆದರೆ ಬುದ್ಧಿಮಾಂದ್ಯ (ಆಟಿಸಂ) ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರಹಾಕುತ್ತಾ ಅವರನ್ನೂ ಸಾಮಾನ್ಯರಂತೆ ಮಾಡುವ ಪ್ರಯತ್ನದಲ್ಲಿದೆ ಬಬಲ್ಸ್ ಸೆಂಟರ್ ಫಾರ್ ಆಟಿಸಂ. ಈ ಪ್ರಯತ್ನದ ಫಲ ಎಂಬಂತೆ ಭಾನುವಾರ (ಮಾರ್ಚ್ 5) ಸಂಸ್ಥೆಯಲ್ಲಿ ಕಲಿಯುತ್ತಿರುವ 40 ಬುದ್ದಿಮಾಂದ್ಯ ಮಕ್ಕಳು 'ದ ಎಂಚಾಂಟೆಡ್ ಲ್ಯಾಂಪ್' ಎನ್ನುವ ನಾಟಕವನ್ನು ಪ್ರಸ್ತುತಪಡಿಸಲಿದ್ದಾರೆ.

ಶೈಕ್ಷಣಿಕ ಚಟುವಟಿಕೆಯ ಒಂದು ಭಾಗವಾಗಿಯೇ ಮಕ್ಕಳಿಗೆ ನಾಟಕವನ್ನು ಇಲ್ಲಿ ಹೇಳಿಕೊಡಲಾಗುತ್ತದೆ. ಅಂದರೆ ಶಾಲೆ ಪ್ರಾರಂಭವಾದಾಗಿನಿಂದ ಡಯಾನಾ ತೊಳೂರು ಎನ್ನುವವರು ವಾರದಲ್ಲಿ ಒಂದು ದಿನ ಶಾಲೆಗೆ ಬಂದು ಮಕ್ಕಳಿಗೆ ನಾಟಕ ತರಬೇತಿ ನೀಡುತ್ತಾರೆ. ಅವರಿಂದ ಕಲಿತ ಪಾಠದ ತಾಲೀಮನ್ನು ಸಂಸ್ಥೆಯ ಸಿಬ್ಬಂದಿ ಮಕ್ಕಳಿಗೆ ನಿರಂತರವಾಗಿ ಹೇಳಿಕೊಡುತ್ತಿರುತ್ತಾರೆ. ಚಿಕ್ಕ ಚಿಕ್ಕ ಸನ್ನಿವೇಶಗಳನ್ನು ಮಾತ್ರ ತರಗತಿಗಳಲ್ಲಿ ಹೇಳಿಕೊಟ್ಟು ವರ್ಷಾಂತ್ಯದ ಒಂದು ತಿಂಗಳು ಪೂರ್ತಿ ನಾಟಕವನ್ನು ಮಕ್ಕಳಿಂದ ಮಾಡಿಸಿ ರಿಹರ್ಸಲ್ ಮಾಡಲಾಗುತ್ತದೆ.

ಹೀಗೆ ಕಲಿತ ನಾಟಕಗಳನ್ನು ಕಳೆದ ಐದು ವರ್ಷಗಳಿಂದ ಮಕ್ಕಳು ಪ್ರದರ್ಶಿಸುತ್ತಿದ್ದಾರೆ. 'ಜಾಯ್ ಟು ದ ವರ್ಲ್ಡ್', 'ಆಲ್ ಥಿಂಗ್ಸ್ ಪಾಸಿಬಲ್', 'ಸಮ್‌ವೇರ್ ಟು ಶೈನ್' ಹಾಗೂ 'ಲಯನ್ ಕಿಂಗ್' ನಾಟಕಗಳನ್ನು ಮಕ್ಕಳು ಇದುವರೆಗೆ ಪ್ರದರ್ಶಿಸಿದ್ದಾರೆ. 'ಕಳೆದ ವರ್ಷದಿಂದ ಈ ನಾಟಕಗಳಿಗೆ ಟಿಕೆಟ್ ಕೂಡ ಇಡಲಾಗುತ್ತಿದ್ದು, ಸಭಾಂಗಣ ತುಂಬ ಜನ ಕಿಕ್ಕಿರಿದು ಸೇರಿದ್ದರು' ಎಂದು ಖುಷಿ ವ್ಯಕ್ತಪಡಿಸುತ್ತಾರೆ ಶಾಲೆಯ ಸಂಸ್ಥಾಪಕ ನಿರ್ದೇಶಕಿ ಹಾಗೂ ಮ್ಯಾನೇಜಿಂಗ್ ಟ್ರಸ್ಟಿ ಆಗಿರುವ ಸರ್ಬಾನಿ ಮಲ್ಲಿಕ್.

ಸಾಮಾನ್ಯವಾಗಿ ಬುದ್ಧಿಮಾಂದ್ಯ ಮಕ್ಕಳಿಗೆ ದೊಡ್ಡ ಧ್ವನಿ ಕೇಳಿದರೆ ಭಯ ಆಗುತ್ತದೆ. ಅವರಲ್ಲಿ ಆತ್ಮವಿಶ್ವಾಸ ಇರುವುದಿಲ್ಲ. ಮಾತನಾಡುವುದಕ್ಕಿಂತ ಹೆಚ್ಚಾಗಿ ಎಲ್ಲವುದಕ್ಕೂ ಕಿರುಚುತ್ತಾರೆ. ಆದರೆ ಬಬಲ್ಸ್ ಸ್ಕೂಲ್ ಆಫ್ ಆಟಿಸಂನಲ್ಲಿ ಓದುತ್ತಿರುವ ಮಕ್ಕಳಲ್ಲಿ 'ನಾಟಕ ತರಬೇತಿ ಪಡೆದ ಮೇಲೆ ಸಾಕಷ್ಟು ಬದಲಾವಣೆ ಕಂಡುಬಂದಿದೆ. ಆತ್ಮವಿಶ್ವಾಸ ಹೆಚ್ಚಾಗಿದೆ, ಗದ್ದಲ ಕೇಳಿದರೆ ಭಯ ಪಡುವುದು ಕಮ್ಮಿಯಾಗಿದೆ, ಹೆಚ್ಚೆಚ್ಚು ಮಾತನಾಡಲು ಪ್ರಯತ್ನಿಸುತ್ತಾರೆ. ಒಟ್ಟಿನಲ್ಲಿ ಇಂಥ ಮಕ್ಕಳಲ್ಲಿನ ಪರಿಪೂರ್ಣ ಬೆಳವಣಿಗೆಗೆ ರಂಗಭೂಮಿ ಅತ್ಯುತ್ತಮ ಮಾಧ್ಯಮವಾಗಬಲ್ಲುದು ಎಂಬುದನ್ನು ಕಂಡುಕೊಂಡಿದ್ದೇವೆ' ಎನ್ನುತ್ತಾರೆ ಅವರು.

ಸಂಸ್ಥೆಯ ಕುರಿತ ಮಾಹಿತಿಗೆ- www.bubblesblr.org ❖

## ಭಾನುವಾರ ನಾಟಕ ಪ್ರದರ್ಶನ

ಅಂದಹಾಗೆ ಕೇಂದ್ರದಲ್ಲಿ ಓದುತ್ತಿರುವ 40 ಬುದ್ಧಿಮಾಂದ್ಯ ಮಕ್ಕಳು ಹಾಗೂ 28 ಸಿಬ್ಬಂದಿ ಭಾಗವಹಿಸಲಿರುವ 'ಎಂಚಾಂಟೆಡ್ ಲ್ಯಾಂಪ್' ನಾಟಕ ಒಂದೂವರೆ ಗಂಟೆಗಳ ಕಾಲ ಪ್ರದರ್ಶನ ಕಾಣಲಿದೆ. ಡಯಾನಾ ತೊಳೂರು ಅವರು ನಾಟಕವನ್ನು ನಿರ್ದೇಶಿಸಿದ್ದಾರೆ. ಕಾರ್ಯಕ್ರಮದ ಅತಿಥಿಯಾಗಿ ಸಿಐಆರ್‌ಎ ಲಿಮಿಟೆಡ್‌ನ ಜನರಲ್ ಕೌನ್ಸಿಲ್‌ನ ಅಮಿತ್ ಗುಪ್ತಾ ಭಾಗವಹಿಸಲಿದ್ದಾರೆ. ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿಕಾವಲ್, ಮಲ್ಲೇಶ್ವರ. ಭಾನುವಾರ ಸಂಜೆ 6.30. ಟಿಕೆಟ್ ದರ- ₹200, ₹500, ₹1000. ಟಿಕೆಟ್‌ಗಳು bookmyshow.comನಲ್ಲಿಯೂ ಲಭ್ಯ.



ನಾಟಕ ತಯಾರಿಯಲ್ಲಿ ಮಕ್ಕಳು